ಮುತ್ತಿಕ್ಕಿದ. ಹಾಗೆ ಮಾಡಬೇಡ ಎಂಬಂತೆ ವಿಮಾನ ಅತ್ತ ವಾಲಿತು. ಕಿಟಕಿಯತ್ತ ಜಾರಿ ಹೊರಳಿದಳು. ಅವಳ ತುಂಬಿದ ಎದೆಗಳು ಬಿರಿದು ತನ್ನತ್ತ ನೋಡು ಎಂಬಂತೆ ಅವನನ್ನೇ ಕರೆದವು. ಆಕಾಶ ರಮಣೀಯವಾಗಿತ್ತು. ಅವಳೆದೆಯ ಕಣಿವೆ ಭೂತಾಯ ಇಳಿಜಾರಿನಂತಿತ್ತು. ಅವಳು ಒಬ್ಬಳೇ... ಭೂಮಿಯೂ ಒಂದೇ... ಅವನ ಬಿಸಿಯಾದ ಮುಂಗೈ ಅರೆತೆರೆದ ಅವಳ ಕಣ್ಣುಗಳಿಂದ ಹಿಂದೆ ಸರಿಯಿತು. ನೀತಿಯ ಭಯವಿದ್ದಲ್ಲಿ ಯಾವ ಹೆಣ್ಣ ದೇಹವನೂ ಯಾರು ಕೂಡ ಯಾವುದೇ ಸ್ಥಿತಿಯಲ್ಲೂ, ಎಲ್ಲೂ ಮುಟ್ಟಲಾಗದು ಎಂದನಿಸಿತು ಅವನಿಗೆ. ಗಗನಸಖಿಯರು ಏನೇನನ್ನು ಉಪಚರಿಸಿ ಕರೆದರು. ಅಮಲು ಪೇಯವ ತನ್ನಿರೆಂದುಕೊಟ್ಟರು. ಕುಡಿದ. ಮದವೇರಿದ. ಆಕೆ ತಂಪು ಪಾನೀಯ ಸವಿದು, ಯಾರು ಈ ಅಪರಿಚಿತ ಪುರುಷ ತನ್ನ ಜಡೆ ಹಿಡಿದಂತೆ ಮೋಹದಲಿ, ಭಾವದಲಿ ಜಗ್ಗಿ ಕರೆಯುತ್ತಿರುವವನು ಎಂದು ಗಮನಿಸಿದಳು.

ಮೋಹದ ಅಮಲಲ್ಲೇ ಆತ ಮುಳುಗಿದ್ದ. ಅವಳೊಬ್ಬಳು ಮುಕ್ತ ಚೆಲುವೆ. ಜಾಗತಿಕ ಮಾರುಕಟ್ಟೆಯ ವಿನ್ಯಾಸ ಸುಂದರಿ. ಗಗನದಲ್ಲೇ ಅವರು ತನ್ನ ಪ್ರೇಮದ ಒಂದು ಕನಸಿನ ಪಯಣದ ಒಂದು ಮಗ್ಗಲು ಬದಲಿಸಿದ್ದ ಮಾತೇ ಆಡಿರಲಿಲ್ಲ. ಅವಳ ಮುಂಗೈನಾದರೂ ಮುಟ್ಟಿರಲಿಲ್ಲ. ಮೃದು ಮಧುರ ಮಂದಾರದ ಲೋಹದ ಒಂದು ಮುತ್ತನಾದರೂ ನೀಡಿರಲಿಲ್ಲ. ಮಾಯಾನಗರಿಯ ವಿಮಾನ ನಿಲ್ದಾಣದಲಿ ಬಂದು ನಡೆದ. ಅವಳು ಎಲ್ಲೋ ನಡೆಯುತ್ತಿದ್ದಳು. ಆತನ ದಾರಿಯೆ ಅವನಿಗೆ ಮರೆತುಹೋಗಿತ್ತು. ತಪಾಸಣೆಯ ಜಾಗತಿಕ ಎಚ್ಚರಿಕೆಗಳಲ್ಲಿ ಅವನನ್ನು ಪರೀಕ್ಷಿಸಿ ನಡೆ ಎಂದರು.

ಮುಂದೆ ಬಂದು ನೋಡಿದರೆ ತುಂಡು ಹುಡುಗಿಯರ ಅಸಾಧ್ಯ ಚೆಲುವಿನ ತೊಡೆಗಳ ಕಂಡು ಆತ ಬೆರಗಾದ. ತೊಡೆಗಳು ಪ್ರಪಂಚದ ನಾಗರಿಕತೆಯ ತಳಪಾಯಗಳು ಎಂದು ಆತ ಉದ್ಧರಿಸಲೇಬೇಕಿತ್ತು. ಹೆಣ್ಣು ತೊಡೆಗಳ ನಡುವೆ ಅವನ ಸುತ್ತ ಪ್ರಜ್ಞೆಗೆ ಸೂರ್ಯೋದಯವಾಗಿತ್ತು. ಏನನ್ನೂ ಆತ ಅನೈತಿಕವಾಗಿ ಮುಟ್ಟಿರಲಿಲ್ಲ. ಆ ಚೆಲುವೆ ಆ ನಿಲ್ದಾಣದ ಜಂಗುಳಿಯಲ್ಲಿ ಮಾಯವಾಗಿದ್ದಳು. ಜನ್ಮಾಂತರಗಳಿಗೆ ಸಾಕಾಗುವಷ್ಟು ಆಕಾಶದ ಆ ಅನಂತ ಪಯಣದಲ್ಲೇ ಆಕೆಯನ್ನು ಆತ ದಿಟ್ಟಿಸಿದ್ದ. ಮೋಹದ ಆತ್ಮಗಳು ಎಲ್ಲಿ ಸಂಗಮಿಸಬಲ್ಲವು... ತಾನು ಮತ್ತೆ ಅವಳ ಎಲ್ಲಿ ಕಾಣಬಲ್ಲೆ ಎಂದು ಬಹಳ ಕಾಲದ ತನಕ ಅವಳ ಚೆಲುವನ್ನು ಆತ ಮನದಲ್ಲೇ ರಕ್ಷಿಸುತ್ತಿದ್ದ. ಮುದ್ದಿಸುತ್ತಿದ್ದ. ಭ್ರಮೆಯು ಮನುಷ್ಯರ ಅಸಹಾಯಕತೆಯ ಒಂದು ಕೊಂಡಿಯೇ... ದೇವರು ಸಿಗಲಿಲ್ಲ ಎಂದು ಮೋಹ ಭ್ರಮೆಯಲಿ ದೇವರ ಕಂಡು ಕೊಂಡವರ ಭಕ್ತಿಯನು ಸಹಿಸಬಹುದು... ಆದರೆ ದೇವರ ಚೆಲುವನ್ನು ಕಂಡವರು ಉಂಟೇ...

ವಿಚಲಿತನಾಗಿ ಆತ ಆ ಚೆಲುವೆಯ ನೆನೆವ ಸುಖದಲ್ಲಿ ಹುಡುಕಾಡಿದ. ಮೂರ್ಖರಿಗೆ ಚೆಲುವೆಯರು ಬಿಟ್ಟಿಯಾಗಿ ಸಿಕ್ಕಿಬಿಟ್ಟಿರುತ್ತಾರೆ... ದೇವರು ಕೂಡ ದೂರ್ತರಿಗೆ ಸಲೀಸಾಗಿ ಒದಗಿ ಬಂದಿರುತ್ತಾನೆ. ಆಕ್ಷೇಪಿಸಬಾರದು. ಹೆಣ್ಣ ಚೆಲುವು ಒಂದು ಸಾಕ್ಷಾತ್ಕಾರ. ಅನರ್ಹರಿಗೆ ಅದು ಯಾಕೆ ಸಿಗುವುದೊ ದೇವರೇ ಎಂದು ಆತ ಪರಿತಪಿಸಿದ. ವಿಕಾಸದ ಯಾವ ಸ್ಥಿತಿಯೊ...

ಆತ ವಿವೇಚನೆಯ ಮುಪ್ಪಿನಲಿ ದಣಿದು ಕೂತಿದ್ದ. ಅಂತದೇ ಒಬ್ಬಳು ಚೆಲುವೆ ಬಂದು ಪ್ರೇಮಕಾಯದ ಬಗ್ಗೆ ಪ್ರಶ್ನಿಸಿದ್ದಳು. ಒಂದು ಕಾಲದ ಅಲೆಯ ಕೊನೆಯ ಮುದುಕ ನಾನು... ಮಗು ಮಗುವಿನ ಮಗು ನೀನು... ತಾಯಿ ತಾಯಿಯ ತಾಯಿ ನೀನು... ತಂದೆ ತಂದೆಯ ತಂದೆ ನೀನು... ಸಾಕು ಒಂದೇ ನಿನ್ನ ಮುತ್ತು... ಅಪ್ಪಿಕೊಂಡು ಸಾಯುವೆ ಬಾ ಎಂದು ಆತ ಕರೆದ. ಆ ಚೆಲುವೆಯೂ ಮುದುಕನೂ ಕಾಲದ ಪ್ರಾಯದ ಜೊತೆ ಮಾತನಾಡುತ್ತಲೇ ಇದ್ದರು.